StudentBounty.com

**First Semester Three Year LL.B. Examination, June 2011**
**LAW OF TORTS AND CONSUMER LAW (Course – III)**

Duration : 3 Hours Max. Marks : 100

**Instructions** : 1. Answer **all** Units.
ಎಲ್ಲಾ ಘಟಕಗಳಿಗೆ ಉತ್ತರಿಸತಕ್ಕದ್ದು.
2. Part **a)** carries **15** marks and Part **b)** carries **5** marks.
ಭಾಗ **(ಅ)** ಕ್ಕೆ **15** ಅಂಕಗಳು ಭಾಗ **(ಬ)** ಕ್ಕೆ **5** ಅಂಕಗಳು.

**UNIT – I**

Q. No. 1. (a) Define 'Tort' and explain the maxim "Injuria sine damnum". Marks : 15
'ಅಪಕೃತ್ಯ'ವನ್ನು ವ್ಯಾಖ್ಯಾನಿಸಿರಿ ಮತ್ತು 'ಹಾನಿಯಿಲ್ಲದ ಕ್ಷತಿ' ತತ್ವವನ್ನು ವಿವರಿಸಿರಿ.

OR/**ಅಥವಾ**

Explain the relevance of mental element in 'Tort'.
ಅಪಕೃತ್ಯದಲ್ಲಿ ಮಾನಸಿಕ ಮನೋಭಾವದ ಅವಶ್ಯಕತೆಯನ್ನು ವಿವರಿಸಿರಿ.

(b) 'A' and 'B' are neighbours. 'A' constructed a well in his land. Due to the same 'B's well dried up. 'B' wants to file a suit against 'A'. Advice him. Marks : 5

'ಅ' ಮತ್ತು 'ಬ' ನೆರೆಹೊರೆಯವರಾಗಿದ್ದಾರೆ. 'ಅ' ನು ತನ್ನ ಜಮೀನಿನಲ್ಲಿ ಒಂದು ಬಾವಿಯನ್ನು ತೋಡುತ್ತಾನೆ. ಆದರಿಂದಾಗಿ 'ಬ'ನ ಬಾವಿಯ ನೀರು ಒಣಗಿ ಹೋಗುತ್ತದೆ. 'ಬ' ನು 'ಅ' ನ ವಿರುದ್ಧ ದಾವೆ ಹೂಡಲು ಬಯಸುತ್ತಾನೆ. ಸಲಹೆ ನೀಡಿರಿ.

OR/**ಅಥವಾ**

'A' a returning officer, wrongfully refused to register a duly tendered vote of the plaintiff, a legally qualified voter. The candidate for whom the vote was tendered was elected and no loss was suffered by the rejection of the vote. But, the plaintiff wants to file a suit against the returning officer to recover damages. Advise him.

ಕಾನೂನು ಬದ್ಧವಾಗಿ ಮತಹಾಕಲು ಅರ್ಹತೆ ಹೊಂದಿದ ವಾದಿಯ ಮತವನ್ನು ಮತಗಟ್ಟೆಯ ಅಧಿಕಾರಿಯು ಅನ್ಯಾಯವಾಗಿ ತಿರಸ್ಕರಿಸಿದನು. ಆದರೂ ವಾದಿಯು ಯಾವ ವ್ಯಕ್ತಿಗೆ ಮತವನ್ನು ಕೊಡಬೇಕೆಂದಿದ್ದನೋ ಆತನು ಆರಿಸಲ್ಪಟ್ಟನು. ಮತವನ್ನು ತಿರಸ್ಕರಿಸಿದ್ದರ ಕಾರಣದಿಂದ ಯಾವ ಹಾನಿಯೂ ಸಂಭವಿಸಲಿಲ್ಲ, ಆದರೆ ವಾದಿಯು ಮತಗಟ್ಟೆಯ ಅಧಿಕಾರಿಯ ವಿರುದ್ಧ ನಷ್ಟಪರಿಹಾರಕ್ಕಾಗಿ ದಾವೆಯನ್ನು ಹಾಕಲು ಬಯಸುತ್ತಾನೆ. ಆತನಿಗೆ ಸಲಹೆ ನೀಡಿರಿ.

**P.T.O.**

www.StudentBounty.com

StudentBounty.com

## UNIT – II

Q. No. 2. (a) Explain the doctrine of "*Volenti non fit injuria*" with exceptions. Marks : 15

'ಸಮ್ಮತಿಸಿ ಮಾಡಿಕೊಂಡಿದ್ದು ಕ್ಷತಿಯಲ್ಲ' ಈ ಸಿದ್ಧಾಂತವನ್ನು ಅಪವಾದಗಳೊಂದಿಗೆ ವಿವರಿಸಿರಿ.

OR/**ಅಥವಾ**

Discuss "vicarious liability" with decided cases.

"ಪರರಿಂದಾದ ಕೃತ್ಯಕ್ಕೆ ಮಾಲೀಕನ ಹೊಣೆಗಾರಿಕೆ"ಯನ್ನು ನಿರ್ಧಾರಿತ ಪ್ರಕರಣಗಳೊಂದಿಗೆ ಚರ್ಚಿಸಿರಿ.

(b) 'X' was passing by 'Y' s house. 'Y's dog attacked 'X' and tried to bite him. 'X' took his gun and pointed it at the dog. The dog got scared and started running back. Still 'X' shot the dog and killed it. 'Y' intends to file suit against 'X' to recover damages. Advise 'Y'. Marks : 5

'X' ಅನು 'Y'ನ ಮನೆಯ ಮುಂದೆ ಹಾದು ಹೋಗುತ್ತಿದ್ದನು. 'Y'ನ ನಾಯಿ 'X'ನ ಮೇಲೆ ಆಕ್ರಮಣ ಮಾಡಿತು ಮತ್ತು ಆತನನ್ನು ಕಚ್ಚಲು ಪ್ರಯತ್ನಿಸಿತು. 'X' ನು ತನ್ನ ಬಂದೂಕನ್ನು ತೆಗೆದು ನಾಯಿ ಕಡೆ ತೋರಿಸಿದನು. ನಾಯಿಯು ಹೆದರಿ, ಹಿಂದಕ್ಕೆ ಓಡಲು ಪ್ರಾರಂಭಿಸಿತು. ಆದರೂ 'ಅ'ನು ಅದನ್ನು ಬಂದೂಕಿನಿಂದ ಹೊಡೆದು ಸಾಯಿಸಿದನು 'ಬ' ನು 'ಅ' ನ ವಿರುದ್ಧ ನಷ್ಟ ಪರಿಹಾರ ಪಡೆಯಲು ದಾವೆಯನ್ನು ಹಾಕಲು ಬಯಸುತ್ತಾನೆ ಆತನಿಗೆ ಸಲಹೆ ನೀಡಿರಿ.

OR/**ಅಥವಾ**

'Raju', the driver attached to the collector's office, was bringing the office jeep from the garage to the office. Due to his negligent driving the jeep met with an accident and injured a woman walking by the side of the road. She brings an action against the government to recover damages. Decide.

ಕಲೆಕ್ಟರ್‌ರವರ ಕಛೇರಿಯ ವಾಹನ ಚಾಲಕನಾದ ರಾಜು, ಕಛೇರಿಯ ಜೀಪನ್ನು ಗ್ಯಾರೇಜಿನಿಂದ ಕಛೇರಿಗೆ ತರುತ್ತಾ ಇದ್ದನು. ಆತನ ನಿರ್ಲಕ್ಷ ಚಾಲನೆಯಿಂದ, ಆ ಜೀಪು ಅಪಘಾತಕ್ಕೊಳಗಾಯಿತು ಮತ್ತು ರಸ್ತೆಯ ಬದಿಯಲ್ಲಿ ನಡೆಯುತ್ತಿದ್ದ ಮಹಿಳೆಯೋರ್ವಳನ್ನು ಗಾಯಗೊಳಿಸಿತು. ಅವಳು ನಷ್ಟ ಪರಿಹಾರಕ್ಕಾಗಿ, ಸರಕಾರದ ವಿರುದ್ಧ ಕ್ರಮವನ್ನು ಕೈಗೊಳ್ಳುತ್ತಾಳೆ. ನಿರ್ಧರಿಸಿರಿ.

## UNIT – III

Q. No. 3. (a) Discuss the principle of "remoteness of damage" with reference to decided cases. Marks : 15

"ದೂರದ ನಷ್ಟತತ್ವ" ವನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿರಿ.

OR/**ಅಥವಾ**

Define nuisance. Distinguish between public and private nuisance.

'ಉಪದ್ರವ' ವನ್ನು ವ್ಯಾಖ್ಯಾನಿಸಿ. ಖಾಸಗಿ ಹಾಗೂ ಸಾರ್ವಜನಿಕ ಉಪದ್ರವಗಳ ನಡುವಿನ ವ್ಯತ್ಯಾಸಗಳನ್ನು ಹೇಳಿರಿ.

www.StudentBounty.com

StudentBounty.com

(b) 'A' left his donkey tying its front legs. The donkey was run over by a car, negligently driven by 'B' and the donkey was killed. A brings an action against 'B' to recover damages for the death of his donkey. Decide. Marks : 5

'ಅ'ನು ತನ್ನ ಕತ್ತೆಯ ಮುಂಗಾಲುಗಳನ್ನು ಕಟ್ಟಿ ರಸ್ತೆಯ ಮಧ್ಯದಲ್ಲಿ ಬಿಟ್ಟಿದ್ದನು. 'ಬ'ನು ನಿರ್ಲಕ್ಷ್ಯತನದಿಂದ ತನ್ನ ಕಾರನ್ನು ಚಲಾಯಿಸಿ ಕತ್ತೆಯ ಮೇಲೆ ಹಾಯಿಸಿದನು. ಆ ಕತ್ತೆಯು ಕೊಲ್ಲಲ್ಪಟ್ಟಿತು. 'ಅ'ನು 'ಬ'ನ ವಿರುದ್ಧ ತನ್ನ ಕತ್ತೆಯ ಸಾವಿಗಾಗಿ ಪರಿಹಾರಕ್ಕಾಗಿ ಕ್ರಮವನ್ನು ಕೈಗೊಳ್ಳುತ್ತಾನೆ. ನಿರ್ಧರಿಸಿರಿ.

OR/**ಅಥವಾ**

The shirt worn by 'Vijay' contained excessive sulphur and as a consequence, he contacted a skin disease. 'Vijay' had purchased the shirt from Golden cloth shop recently. The shirt was manufactured by Lakshmi Knitting Mills. Vijay wants to file a suit against Laxmi Knitting Mills to recover damages. Advise Vijay.

ವಿಜಯ ಅವರು ಧರಿಸಿದ ಅಂಗಿಯಲ್ಲಿ ಗಂಧಕದ ಅಂಶ ಹೆಚ್ಚಾಗಿ ಇದ್ದದ್ದರಿಂದ ಅವರಿಗೆ ಚರ್ಮರೋಗ ಬಂದಿತು. ವಿಜಯನು ಆ ಅಂಗಿಯನ್ನು ಗೋಲ್ಡವಿನ ಅರಿವೆ ಅಂಗಡಿಯಿಂದ ಇತ್ತೀಚೆಗಷ್ಟೇ ಖರೀದಿ ಮಾಡಿದ್ದರು. ಆ ಅಂಗಿಯನ್ನು "ಲಕ್ಷ್ಮಿ ನಿಟಿಂಗ್ ಮಿಲ್ಸ್"ನವರು ತಯಾರಿಸಿದ್ದರು. ವಿಜಯನು "ಲಕ್ಷ್ಮಿ ನಿಟಿಂಗ್ ಮಿಲ್ಸ್" ನವರ ವಿರುದ್ಧ ನಷ್ಟ ಪರಿಹಾರಕ್ಕಾಗಿ ದಾವೆಯನ್ನು ಹಾಕಲು ಬಯಸುತ್ತಾರೆ. ವಿಜಯನಿಗೆ ಸಲಹೆ ನೀಡಿರಿ.

## UNIT – IV

Q. No. 4. (a) Define 'deformation'. Distinguish between 'libel' and 'slander'. Marks : 15

ಮಾನಹಾನಿಯನ್ನು ವ್ಯಾಖ್ಯಾನಿಸಿರಿ. ಮಾನಹಾನಿ ಲೇಖನ ಮತ್ತು ಮೌಖಿಕ ಮಾನಹಾನಿಗಳಲ್ಲಿರುವ ವ್ಯತ್ಯಾಸಗಳನ್ನು ವಿವರಿಸಿ.

OR/**ಅಥವಾ**

Explain the essential ingredients of "Malicious prosecution".

ದುರ್ಭಾವನಾಪೂರ್ಣ ಅಭಿಯೋಗದ ಅತ್ಯಾವಶ್ಯಕ ಘಟಕಗಳನ್ನು ವಿವರಿಸಿರಿ.

(b) Write short note on : Marks : 5

ಲಘು ಟಿಪ್ಪಣಿ ಬರೆಯಿರಿ :

Inducing for the breach of contract.

ಕರಾರು ಉಲ್ಲಂಘನೆಗೆ ಪ್ರೇರೇಪಿಸುವದು.

OR/**ಅಥವಾ**

Conspiracy.

ಒಳಸಂಚು.

www.StudentBounty.com

StudentBounty.com

## UNIT – V

Q. No. 5. (a) Explain the composition and jurisdiction of State Commission under the Consumer Protection Act 1986. Marks : 15

ಗ್ರಾಹಕರ ಅಧಿನಿಯಮ 1986ರ ಅಡಿಯಲ್ಲಿ 'ರಾಜ್ಯ ಗ್ರಾಹಕರ ಆಯೋಗ' ದ ರಚನೆ ಮತ್ತು ಅಧಿಕಾರವನ್ನು ವಿವರಿಸಿರಿ.

OR/**ಅಥವಾ**

Explain the composition and jurisdiction of National Commission under the Consumer Protection Act 1986.
ಗ್ರಾಹಕರ ಅಧಿನಿಯಮ 1986ರ ಅಡಿಯಲ್ಲಿ ರಾಷ್ಟ್ರೀಯ ಗ್ರಾಹಕರ ಆಯೋಗದ ರಚನೆ ಮತ್ತು ಅಧಿಕಾರವನ್ನು ವಿವರಿಸಿರಿ.

(b) Write short notes on : Marks : 5

ಲಘು ಟಿಪ್ಪಣಿ ಬರೆಯಿರಿ :

Consumer

ಗ್ರಾಹಕ

OR/**ಅಥವಾ**

"Restrictive trade practice".

ನಿರ್ಬಂಧ ವ್ಯಾಪಾರ ಪದ್ಧತಿ.

---

www.StudentBounty.com